ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**

**PAPER CLIPPINGS**

12

ಇಲಾಖೆ / ವಿಷಯ : DEPARTMENT / SUBJECT: ____________

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 15/10/2020

# ಕಸ್ತೂರಿ ವರದಿ ವಿರುದ್ಧ ಮತ್ತೆ ರಾಜ್ಯದ ಆಕ್ಷೇಪ

## ಮಲೆನಾಡ ಶಾಸಕರಿಗೆ ಸಿಎಂ ಭರವಸೆ

■ **ವಿಕ ಸುದ್ದಿಲೋಕ** ಬೆಂಗಳೂರು

ಕಸ್ತೂರಿ ರಂಗನ್ ವರದಿಯನ್ನು ಯಥಾವತ್ ಜಾರಿಗೊಳಿಸಬಾರದೆಂದು ಕೋರಿ ಕೇಂದ್ರಕ್ಕೆ ಮತ್ತೊಮ್ಮೆ ಪತ್ರ ಬರೆಯುವುದಾಗಿ ಸಿಎಂ ಯಡಿಯೂರಪ್ಪ ಸ್ಪಷ್ಟ ಭರವಸೆ ನೀಡಿದ್ದಾರೆ.

ವರದಿ ಜಾರಿಗೆ ಸಂಬಂಧಿಸಿ ಡಿ.31 ರೊಳಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕೆಂದು ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವು ಕೇಂದ್ರ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವಾಲಯಕ್ಕೆ ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ಸಿಎಂ ಈ ನಿರ್ಧಾರ ಪ್ರಕಟಿಸಿದ್ದಾರೆ.

ಬುಧವಾರ ಮಲೆನಾಡು ಭಾಗದ ಶಾಸಕರಾದ ಆರಗ ಜ್ಞಾನೇಂದ್ರ ಮತ್ತು ಎಚ್. ಹಾಲಪ್ಪ ತಮ್ಮನ್ನು ಭೇಟಿಯಾಗಿ ಕಸ್ತೂರಿ ರಂಗನ್ ವರದಿಯಿಂದ ಜನರ ಮೇಲಾಗುವ ಪರಿಣಾಮಗಳ ಕುರಿತು ಚರ್ಚಿಸಿದ ಸಂದರ್ಭದಲ್ಲಿ ಸಿಎಂ ಯಡಿಯೂರಪ್ಪ ಈ ಭರವಸೆ ನೀಡಿದ್ದು, ಯಥಾವತ್ತಾಗಿ ವರದಿ ಜಾರಿಗೆ ಅವಕಾಶ ನೀಡುವುದಿಲ್ಲ ಎಂದಿದ್ದಾರೆ.

''ವರದಿ ಜಾರಿಗೆ ಬಂದಲ್ಲಿ ಮಲೆನಾಡಿಗರ ಜೀವನಕ್ಕೆ ತೊಂದರೆ ಆಗಲಿದೆ. ನೂರಾರು ಹಳ್ಳಿಗಳಲ್ಲಿರುವ ರಸ್ತೆ, ಶಾಲೆ, ಆಸ್ಪತ್ರೆ ಇತ್ಯಾದಿ ಮೂಲಸೌಕರ್ಯ ಅರಣ್ಯದ ಭಾಗವಾಗಲಿದೆ. ಇದನ್ನು ಅರಿಯದೆ ಎನ್‌ಜಿಟಿ ಆದೇಶ ಪಾಲಿಸುವ ನೆಪದಲ್ಲಿ ಜನರನ್ನು ಒಕ್ಕಲೆಬ್ಬಿಸುವ ಆತಂಕ ಇರುವುದರಿಂದ ಸರಕಾರ ಮಧ್ಯ ಪ್ರವೇಶ ಮಾಡಬೇಕು'' ಎಂದು ಶಾಸಕದ್ವಯರು ಮುಖ್ಯಮಂತ್ರಿಗಳಲ್ಲಿ ವಿನಂತಿಸಿದರು.




**ವಿಕ ಸರಣಿ ವರದಿ ಮಾಡಿತ್ತು**

ವಿಜಯ ಕರ್ನಾಟಕವು ಕಸ್ತೂರಿ ರಂಗನ್ ವರದಿ ಜಾರಿಯಿಂದಾಗುವ ಸಮಸ್ಯೆಗಳ ಕುರಿತು 'ಕಸ್ತೂರಿ ಸಂಕಟ' ಎಂಬ ಶೀರ್ಷಿಕೆಯಡಿ ಪ್ರಕಟಿಸಿದ ಸರಣಿ ಲೇಖನಗಳು ಗಮನ ಸೆಳೆದಿದೆ.

**ಕೇಂದ್ರ ಪರಿಸರ ಸಚಿವರಿಗೆ ಹಿಂದೊಮ್ಮೆ ಪತ್ರ ಬರೆದು ವರದಿ ಜಾರಿ ಮಾಡದಂತೆ ವಿನಂತಿಸಿದ್ದೆ. ಈಗ ಮತ್ತೆ ಇನ್ನೊಂದು ಪತ್ರವನ್ನು ಬರೆದು ರಾಜ್ಯದ ಮನವಿ ಆಲಿಸುವವರೆಗೂ ವರದಿ ಅನುಷ್ಠಾನಗೊಳಿಸುವ ಸಂಬಂಧ ಅಧಿಸೂಚನೆ ಹೊರಡಿಸದಂತೆ ಆಗ್ರಹಿಸಲಾಗುವುದು.**

**- ಬಿ.ಎಸ್. ಯಡಿಯೂರಪ್ಪ** ಸಿಎಂ

**ಮಲೆನಾಡಿನ ಮೇಲೆ ತೂಗುಗತ್ತಿ | ಸಂಪಾದಕೀಯ »06**